ವಿಶ್ವದ ಪ್ರಾಕೃತಿಕ ಅದ್ಭುತಗಳಲ್ಲಿ ಒಂದಾದ ಕ್ವೀನ್ಸ್‌ಲ್ಯಾಂಡ್‌ನ ಮಹಾ ಹವಳದ ದಿಬ್ಬ ತನ್ನ ಅಸ್ತಿತ್ವ ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದೆ. ಕಲ್ಲಿದ್ದಲು ಗಣಿಗಾರಿಕೆಯ ಯೋಜನೆ ಆಸ್ಟ್ರೇಲಿಯಾದ ಪರಿಸರಕ್ಕೆ ಬಹುದೊಡ್ಡ ಕನ್ನ ಕೊರೆಯುವ ಸಾಧ್ಯತೆಯಿದೆ.

**■ ಗುರುರಾಜ್ ಎಸ್ ದಾವಣಗೆರೆ**





ಗೋಚರಿಸುವ ಇವುಗಳು ವಿಶ್ವದ ಪ್ರವಾಸಿಗರ ಹಾಟ್‌ಸ್ಪಾಟ್. 1625 ಮೀನಿನ ಪ್ರಭೇದ, 3000 ಮೃದ್ವಂಗಿ ಪ್ರಭೇದ, 30 ತಿಮಿಂಗಲ ಹಾಗೂ ಡಾಲ್ಫಿನ್ ಪ್ರಭೇದ ಮತ್ತು 215 ಪಕ್ಷಿ ಪ್ರಭೇದಗಳಿಗೆ ಆವಾಸ ಕಲ್ಪಿಸಿರುವ ದಿಬ್ಬಗಳು ಸಂಶೋಧನೆಗೆ, ವೀಕ್ಷಣೆಗೆ, ಅಧ್ಯಯನಕ್ಕೆ ಮತ್ತು ವ್ಯಾಪಾರಕ್ಕೆಂದು ಲಕ್ಷಾಂತರ ಪ್ರವಾಸಿಗರನ್ನು ವರ್ಷದುದ್ದಕ್ಕೂ ಕೈಬೀಸಿ ಕರೆಯುತ್ತವೆ. ವಾರ್ಷಿಕ 20 ಸಾವಿರ ಕೋಟಿ ರೂಪಾಯಿ ಆದಾಯ ತರುವ ಪ್ರವಾಸೋದ್ಯಮ ಗಣಿಗಾರಿಕೆಯಿಂದಾಗಿ ಆಕರ್ಷಣೆ ಕಳೆದುಕೊಳ್ಳಲಿದೆ.

## ಕೊರತೆ ಎದುರಿಸಲಿರುವ ನೀರಿನ ಒರತೆ

ಗಣಿಯಲ್ಲಿ ಸಿಗುವ ಅದಿರು ಕಳಪೆ ಗುಣಮಟ್ಟದ್ದು. ದೂಳು, ರಾಡಿ, ಇಂಗಾಲ, ಇಂಗಾಲದ ಡೈ ಆಕ್ಸೈಡ್, ಅರಣ್ಯನಾಶಗಳು ಹವಳದ ದಿಬ್ಬದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವುದಲ್ಲದೆ ಗಣಿ ಜಾಗದಿಂದ ಕೇವಲ 8 ಕಿ.ಮೀ. ದೂರವಿರುವ, ಪವಿತ್ರ ಎಂದೇ ಆರಾಧಿಸಲ್ಪಡುವ ಡೂಂಗ್‌ಮಾಬುಲ್ಲಾ ಸಿಹಿನೀರಿನ ಒರತೆ ಮಾಲಿನ್ಯಕ್ಕೆ ತುತ್ತಾಗಲಿದೆ. ವ್ಯಾಂಗನ್ ಮತ್ತು ಜಗಲಿಂಗೊ ಪವಿತ್ರ ವನಗಳ ಕೊಡುಗೆಯಾದ ಈ ಬುಗ್ಗೆ ಆ ಭಾಗದ ಓಯಸಿಸ್ ಎಂದೇ ಪ್ರಸಿದ್ಧ. ಕ್ವೀನ್ಸ್‌ಲ್ಯಾಂಡ್‌ನ ಮಧ್ಯಭಾಗದ ತರೀ ಭೂಮಿಯಲ್ಲಿರುವ ಇದು ನಾಲ್ಕು ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 173 ಸ್ಥಳೀಯ ಸಸ್ಯ, 86 ಪ್ರಾಣಿ, 79 ಪಕ್ಷಿ, 4 ಉಭಯವಾಸಿ ಪ್ರಭೇದಗಳಿಗೆ ಆವಾಸ ಕಲ್ಪಿಸಿದೆ. 187 ಸಿಹಿನೀರಿನ ಬುಗ್ಗೆಗಳನ್ನು ಹೊಂದಿದ್ದು, 160ಕ್ಕೂ ಹೆಚ್ಚು ತರೀ ಭೂಮಿ (**Wet Land**) ಸೃಷ್ಟಿಸಿರುವ ಇದು ಕ್ಲೆಮಾಟಿಸ್ ಎಂಬ ಮರಳುಗಲ್ಲಿವ ಪದರಗಳ ಮೂಲಕ ವರ್ಷವಿಡೀ ನೀರನ್ನು ಚಿಲುಮೆಗಳಲ್ಲಿ ಉಕ್ಕಿಸುತ್ತದೆ. ಆ ಭಾಗದ ಅಂತರ್ಜಲದ ಸಮೃದ್ಧ ಮೂಲವೇ ಈ ಒರತೆ. ಗಣಿಗಾರಿಕೆಗೆ ಬೇಕಾದ ಅಪಾರ ನೀರು ಕೊರೆದ ಕೊಳವೆ ಬಾವಿಗಳಿಗೆ ಇಲ್ಲಿಂದಲೇ ಪೂರೈಕೆಯಾದರೆ ಸಿಹಿನೀರಿನ ಒರತೆ ಕೆಲವೇ ವರ್ಷಗಳಲ್ಲಿ ಖಾಲಿಯಾಗಲಿದೆ. ಹಾಗಾಗದಂತೆ ತಡೆಯಲು ಗಣಿಗಾರಿಕೆಗೆ ಪರವಾನಿಗೆ ನೀಡಿರುವ ಸರ್ಕಾರ, ಯಾವುದೇ ಕಾರಣಕ್ಕೂ ಡೂಂಗ್‌ಮಾಬುಲ್ಲಾದ ನೀರಿನ ಮಟ್ಟ 20 ಸೆಂ.ಮೀ.ನಷ್ಟು ಕಡಿಮೆಯಾದರೆ ಪರವಾನಿಗೆ ಹಿಂಪಡೆಯಲಾಗುವುದು ಎಂಬ ನಿಬಂಧನೆ ಹಾಕಿದೆ. ಗಣಿಗೆ ಬೇಕಾದ ನೀರನ್ನು ಗ್ರೇಟ್ ಆರ್ಟೀಸಿಯನ್ ಬೇಸಿನ್‌ನಿಂದ ಪಡೆಯುವುದರಿಂದ ಹತ್ತಿರದ ಡೂಂಗ್ ಮಾ ಬುಲ್ಲಾ ಒರತೆಗೆ ಯಾವ ಅಪಾಯವೂ ಇಲ್ಲ ಎಂದು ಅದಾನಿ ಸಂಸ್ಥೆ ಹೇಳಿದೆ.

## ಸ್ಟಾಪ್ ಅದಾನಿ!

ಗಣಿಗಾರಿಕೆಯಿಂದ ವಿಶ್ವ ಪಾರಂಪರಿಕ ತಾಣದ ಅಸ್ತಿತ್ವಕ್ಕೆ ಕುಂದು ಬರುತ್ತದೆ ಎಂದರಿತ ಸಮಾಜದ ವಿವಿಧ ವರ್ಗಗಳ 15 ಲಕ್ಷ ಜನ ಗಣಿಗಾರಿಕೆಯ ವಿರುದ್ಧ ಬೃಹತ್ ಹೋರಾಟ ಪ್ರಾರಂಭಿಸಿದ್ದಾರೆ. ಮೆರೈನ್ ಕನ್ಸರ್ವೇಶನ್ ಸೊಸೈಟಿಯ ಶಾನಿ ಟೀಜರ್, 'ಗಣಿಗಾರಿಕೆಗಿಂತ ದೊಡ್ಡ ಭವಿಷ್ಯವಿದೆ' ಎಂಬುದನ್ನು ಆಸ್ಟ್ರೇಲಿಯಾದ ಪ್ರತಿ ಪ್ರಜೆಯೂ ಅರಿತುಕೊಳ್ಳಬೇಕು. ಇಡೀ ಜಗತ್ತಿನಲ್ಲಿ ಎಲ್ಲೂ ಇಲ್ಲದಷ್ಟು ಅಚ್ಚರಿ ಎಂಬಂತಿರುವ ಹವಳದ ದಿಬ್ಬಗಳನ್ನುಳಿಸಿಕೊಳ್ಳುವಲ್ಲಿ ನಾವು ಸೋಲಬಾರದು' ಎಂದಿದ್ದಾರೆ.

ಕಾರ್ಮೈಕೆಲ್ ನದಿ ಮತ್ತು ಗಣಿಯ ಆಸುಪಾಸಿನಲ್ಲಿ ಆವಾಸ ಹೊಂದಿ ಆಗಾಧ ಸಂಖ್ಯೆಯಲ್ಲಿರುವ ಕಪ್ಪು ಕತ್ತಿನ ಫಿಂಚ್ ಪಕ್ಷಿಯ 1400 ರೇಖಾಚಿತ್ರಗಳನ್ನು ಬಿಡಿಸಿರುವ ಕಲಾವಿದರು ಅವುಗಳನ್ನು ಪ್ರಧಾನಿ ಸ್ಕಾಟ್ ಮಾರಿಸನ್‌ಗೆ ಕಳಿಸಿ, 'ಇವುಗಳನ್ನು ಬಲಿಕೊಡಬೇಡಿ' ಎಂದು ಒತ್ತಾಯಿಸಿದ್ದಾರೆ. ಡೂಂಗ್‌ಮಾಬುಲ್ಲಾ ಒರತೆ ನಮ್ಮ ಜೀವನಾಡಿ, ಅದು ಹಾಳಾದರೆ ನಮ್ಮ ಬದುಕೇ ಮುಗಿದಂತೆ ಎನ್ನುವ ಸ್ಥಳೀಯ ರೈತರು ಹಲವು ಪರಿಸರ ಸಂಘಟನೆಗಳ ಜೊತೆ ಕೈ ಜೋಡಿಸಿ 'ಸ್ಟಾಪ್ ಅದಾನಿ' ಎಂಬ ಚಳವಳಿ ಶುರುಮಾಡಿದ್ದಾರೆ. ಮೆಲ್ಬೋರ್ನ್, ಸಿಡ್ನಿ, ಬ್ರಿಸ್ಬೇನ್‌ನ 15 ಸಾವಿರ ಶಾಲಾವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ.

ಇಲ್ಲಿನ ನ್ಯಾಯಾಲಯಗಳು ನ್ಯಾಯ ನೀಡದಿದ್ದರೆ, ಗಣಿಗಾರಿಕೆಯ ವಿರುದ್ಧ ಅಂತರರಾಷ್ಟ್ರೀಯ ನ್ಯಾಯಾಲಯದವರೆಗೂ ಹೋಗುತ್ತೇವೆ ಎನ್ನುತ್ತಾರೆ ಸ್ಥಳೀಯ ನಿವಾಸಿ ಆಡ್ರಿಯನ್ ಬುರ್ರಗುಬ್ಬ. ಪೋರ್ಟ್ ಅಬಾಟ್ ಬಂದರಿನ ಬಳಿ 1984ರಲ್ಲೆ ಪ್ರಾರಂಭಿಸಿದ್ದ ಹಳೆಯ ಕಲ್ಲಿದ್ದಲು ಗಣಿಯಿಂದ ಪರವಾನಿಗೆ ನೀಡಿದ್ದಕ್ಕಿಂತ 800 ಪಟ್ಟು ಹೆಚ್ಚಿನ ಮಾಲಿನ್ಯ ಆಗಿದೆ. ಆದ್ದರಿಂದ ಅದಾನಿ ಹೇಳುವುದನ್ನು ನಂಬಲು ಯಾವ ಆಧಾರಗಳೂ ಇಲ್ಲ ಎಂದು ಪರಿಸರ ಸಂಘಟನೆಗಳು ವಾದಿಸುತ್ತಿವೆ.

2030 ರವರೆಗೂ ಇಂಗಾಲದ ಹೊಮ್ಮುವಿಕೆಯನ್ನು ನಿಯಂತ್ರಿಸುತ್ತೇನೆಂದು ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿರುವ ಆಸ್ಟ್ರೇಲಿಯಾತನ್ನ ಯೋಜನೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಎಚ್ಚರಿಸಿರುವ ವಿಶ್ವಸಂಸ್ಥೆ, ಕೊಟ್ಟ ಮಾತಿನಂತೆ ನಡೆಯಬೇಕು ಎಂದು ತಾಕೀತು ಮಾಡಿದೆ. ಒಟ್ಟಿನಲ್ಲಿ ಅದಾನಿಯ ಅಧ್ವಾನದಿಂದ ಭೂಮಿಯ ಮೇಲಿನ ಸುಂದರ ವರ್ಣ ಚಿತ್ತಾರವೊಂದು ಅಳಿಸಿ ಹೋಗಲಿದೆ.

ಆಸ್ಟ್ರೇಲಿಯಾದ ಹವಳದ ದಿಬ್ಬಗಳ ಬಗ್ಗೆ ಕಾಳಜಿ ಹೊಂದಿದವರು, **#Stopadani, act.greenpeace.org, greens.org.au** ವಿಳಾಸಕ್ಕೆ ಇ–ಪತ್ರ ಬರೆದು ಗಣಿಗಾರಿಕೆ ವಿರುದ್ಧದ ಹೋರಾಟವನ್ನು ಬೆಂಬಲಿಸಬಹುದು. ■